ಸಂದಾಗಿದೆ. ಮನೆ ಒಡತಿ ಪಾರ್ವತಕ್ಕ ಒಳ್ಳೇ ಹೆಂಗ್ಸು. ಊಟ ತಿಂಡಿ ಕುರುಕಲು ಎಲ್ಲಾವ್ನ ಧಾರಾಳವಾಗಿ ತುಂಬಿ ತುಂಬಿ ಕೊಡೋರು. ಅವರು ಕೊಡುತ್ತಿದ್ದ ಕುರುಕಲು ತಿಂಡಿ ಒಮ್ಮೆಲೆ ತಿನ್ನಾಕೆ ಆಗ್ತಾ ಇರ್ಲಿಲ್ಲ. ಆಗ ದಾವಣಿಯ ಸೆರಗ ತುದೀಲಿ ಅದ್ನ ಕಟ್‌ಕೊಂಡು, ಯಾರ್ರೂ ಕಾಣದಂಗೆ ಸೊಂಟಕ್ಕೆ ಸಿಕ್ಕಿಸಿಕೊಂಡು, ಬಿಡುವಾದಾಗ ಮಹಡಿ ಮೇಲಿನ ಮಚ್ಚೇಲಿ ಕೂತು ಮೆಲ್ಲನೆ ತಿನ್ನತ್ತಿದ್ದೆ.

ಪಾರ್ವತಕ್ಕನ ಮಗಳು ಬಾಣಂತಿ, ಯಾವಾಗಲೂ ಬಿಕ್ಕೊಂಡೇ ಇರ್ತಿದ್ಲು. ನನಗೆ ಬರಿ ಕೆಲಸ ಹೇಳೋದೆ. ಒಂದು ದಪನೂ ನನ್ನ ಬಗ್ಗೆ ಏನೂ ಕೇಳ್ತ ಇರ್ಲಿಲ್ಲ. ಆವಕ್ಕನ ಗಂಡ ಮಾತ್ರ ಹೈಕ್ಲಾಸಾಗಿದ್ದ. ಸಿನಿಮಾದವರ ತರ ಸ್ಟೈಲು. ಕಣ್ಣಿಗೆ ಕಪ್ಪು ಕನ್ನಡಿ ಹಾಕ್ಕೊಂಡು ಸ್ಕೂಟರಲ್ಲಿ ಬಂದರೆ ನೋಡೋಕೆ ಎಲ್ಡು ಕಣ್ಣು ಸಾಲ್ದು. ಹೋಗ್ತಾ ಬರ್ತಾ ನಂಗೆ ಕಣ್ಣು ಹೊಡೀತಿದ್ದ. ಬರ್ತಾ ಬರ್ತಾ ನನ್ನ ತುಂಬಾ ಚೆನ್ನಾಗಿ ಮಾತಾಡ್ಸೋಕೆ ಸುರು ಮಾಡ್ದ. ಕದ್ದು ಮುಚ್ಚಿ ಚಾಕಲೇಟ್ ಕೊಡುತ್ತಿದ್ದ.

ಈ ಮನೆ ಒಡೆಯ ಯಾವಾಗಲೂನುವ ಫೋನ್ನಲ್ಲಿ ಮಾತಾಡ್ತಾ ಇರೋರು. ಆದರೆ ಪಾರ್ವತಕ್ಕನ ಹತ್ರ ಮಾತೇ ಆಡಲ್ಲ. ನಮ್ಮವ್ವ ಅಪ್ಪ ಅದೇಸು ಮಾತಾಡ್ತಾ ಒಬ್ಬರಿಗೊಬ್ಬರು ಬವಣೆ ಮಾಡ್ತ ಇರೋರು. ಅದ್ರೆ ಇಲ್ಲಿ ಮಾತಿಲ್ಲ ಕತೆಯಿಲ್ಲ. ಅದೇನೊ ಕಪ ಈ ಮನೇಲಿ ಯಲ್ಲಾ ವಿಚಿತ್ರ. ಮನೆಗೆ ಯಾರ್‍ಯಾರೊ ಬರ್ತರೆ ಹೋಯ್ತರೆ, ಜನ ಬಂದಾಗಲೆಲ್ಲಾ ಪ್ರೊಫೆಸರು, 'ಸೇವಂತಿ ಕಾಫಿ ತಗಂಬಾ' ಅನ್ನೋರು. ಅವರ ಬಾಯಿ ಸದ್ದಾಗುತಿದ್ದಂತೆ, ಪಾರ್ವತಕ್ಕ ಹಾಲಿನ ಕಿಟಕಿಯಿಂದ ವರಾಂಡ ಕಡೆ ಇಣುಕಿ ನೋಡಿ, ಅದೇಸು ಜನ ಅವರೆ ಅಂತ ತಲೆ ಎಣಿಸಿ ಅಷ್ಟು ಲೋಟಕ್ಕೆ ಕಾಫಿ ಬಗ್ಗಿಸಿ ಕೊಟ್ಟು 'ತಗೊಂಡು ಹೋಗು' ಅನ್ನಿದ್ದರು. ಅದ್ಯಾರ್‍ಯಾರೋ ಗಂಡುಸ್ರು ಹೆಂಗಸ್ರು ಎಲ್ಲಾ ಬರೋರು. ಕೆಲವರು ಹಣ್ಣಿನ ಬುಟ್ಟಿ, ಸ್ವೀಟು, ಇನ್ನೂ ಏನೇನೋ ತಕಂಬರ್ತಿದ್ರು. ಪಾರ್ವತಕ್ಕ ನಂಗೂ ಚೆನ್ನಾಗಿ ಕೊಡ್ತಾ ಇದ್ರು, ಒಂದೊಂದಪ ಅವರ್ಗೆ ಕಾಣದಂಗೆ ಮತ್ತಷ್ಟು ತಕ್ಕೊಂಡು ತಿನ್ನಂಬಿಡ್ತಿದ್ದೆ. ನಾನಂತೂ ತಿನ್ಕಂಡು ಉಂಡ್ಕಂಡು ಒಸಿ ಸಂದಾಗೆ ಊದ್ಕಂಡಿದ್ದೆ.

ಸೇವಂತಿ ತನ್ನ ಬಗ್ಗೆ ನಾನ್ ಸ್ಟಾಪ್ ರೈಲು ಬಿಡತೊಡಗಿದಳು.

ತಾನು ಇಲ್ಲಿ ಇದ್ದೇನೆ ಅಂತನೂ ನೋಡದೆ ತಾನೇ ತನಗೆ ಬೇಕಾದಂತೆ ಕಥೆ ಕಟ್ಟೋಕೆ ಸುರುವಿಟ್ಟಳು. ಹೀಗೆ ಬಿಟ್ಟರೆ ಇದು ಸಾವಿರಾರು ಮೈಲು ಓಡಿಬಿಡುತ್ತೆ ಎಂದು ಕಥೆಗಾರನಿಗೆ ಅನ್ನಿಸಿ, 'ಸೇವಂತಿ ಒಸಿ ನಿಲ್ಸಿ ಬಿಡು, ಮುಂದಕ್ಕೆ ನಾನೇ ಕಥೆ ಕಟ್ಟಿಕೊಂಡು ಹೋಗ್ತೀನಿ' ಅಂತ ಅವಳ ಬಾಯಿ ಮುಚ್ಚಿಸಿದ.

ಸೇವಂತಿ ಆ ಪ್ರೊಫೆಸರ್ ಮನೆಗೆ ಬಂದು ಎಂಟ್ಹತ್ತು ತಿಂಗಳಾಗಿತ್ತು ಅನ್ನಿಸುತ್ತೆ. ಅವಳ ಊರಲ್ಲಿ ಜಾತ್ರೆ ಅಂತ ಅವರಪ್ಪ ಅವಳನ್ನು ಒಂದೆರಡು ದಿನದ ಮಟ್ಟಿಗೆ ಕಳುಹಿಸಿ ಅಂತ ಗೋಗರೆದು ಕರಕೊಂಡು ಹೋಗಿದ್ದ. ಎರಡು ದಿನ ಅಂತ ಹೇಳಿ ಒಂದು ವಾರ ಆದ ಮೇಲೆ ಕರಕೊಂಡು ಬಂದರು. ಸೇವಂತಿ ಜೊತೆ ಅವರಪ್ಪ, ಅಮ್ಮ, ಮತ್ತೆ ಐದಾರು ಜನ ಗಂಡಸರು ಬಂದರು. ಸೇವಂತಿಯನ್ನು ಬಿಟ್ಟು ಹೋಗಲು ಅಷ್ಟೊಂದು ಜನ ಏಕೆ ಬಂದರು ಅಂತ ಆ ಮನೆಯ ಒಡತಿ ಯೋಚಿಸುತ್ತಾ ಬಾಗಿಲು ತೆರೆದು – 'ಬನ್ನಿ ಕೂತುಕೊಳ್ಳಿ' ಎನ್ನುತ್ತಿದ್ದಂತೆ, ಅವರೊಂದಿಗೆ ಬಂದಿದ್ದ ದಡಿಯನೊಬ್ಬ, 'ನಾವು ಕುಂತಕ್ಕೊಳ್ಳಕ್ಕೆ ಬಂದಿಲ್ಲ' ಅಂತ ಅಬ್ಬರಿಸಿದ. ಸೇವಂತಿ ಸಹ ಒಳಗೆ ಬರದೆ ಅಲ್ಲೇ ಕಿಟಕಿಗೊರಗಿ ನಿಂತುಕೊಂಡಳು. ಮನೆಯ ಒಡತಿ ಪಾರ್ವತಿಗೆ ಆಶ್ಚರ್ಯವಾಯ್ತು. ಅವರುಗಳ ವರ್ತನೆ ವಿಚಿತ್ರ ಅನ್ನಿಸಿತು. 'ಅರೆ ಕೂತುಕೊಳ್ಳದೆ ಇರೋವಂತದ್ದು ಏನಾಯ್ತು?' ಎಂದು ಕೇಳಿದರು.

ಅವಳ ಮಾತು ಮುಗಿದಿರಲಿಲ್ಲ, 'ಇನ್ನೇನವ್ವ ಆಗಬೇಕು? ಆಗಬಾರದೆಲ್ಲಾ ಆಗೈತಲ್ಲ? ಏನೋ ದೊಡ್ಡ ಮನಸ್ರು. ನಮ್ಮ ಹುಡುಗಿ ಉದ್ದಾರ ಅಯ್ತಳೆ ಅಂತ ಕಳ್ಸುದ್ರೆ, ಇಂತ ಬೇವರ್ಸಿ ಕೆಲಸಾನ ಮಾಡೋದು?'

'ಈಗ ಏನಾಗಿದೆ ಅಂತ'.

'ಏನಾಗೈತಾ? ಹೇಳ್ತೀವಿ, ಮೊದ್ಲು ಈ ಮನೇಲಿರೊ ಗಂಡಸರನ್ನೆಲ್ಲಾ ಕರ್ರಿ ಇಲ್ಲಿಗೆ'.

ಗಲಾಟೆ ಕೇಳಿ ಹೊರಬಂದ ಬಾಣಂತಿ ಮಗಳು, 'ಮಗು ಮಲಗಿದೆ. ಸ್ವಲ್ಪ ಮೆಲ್ಲಗೆ ಮಾತಾಡಿ, ಯಾರು ನೀವೆಲ್ಲ?' ಎಂದು ದನಿ ಎತ್ತರಿಸಿದಳು. 'ಓಹೊಹೋ ನಮಗಿಲ್ಲಿ ಪ್ರಾಣ ಹೋಯ್ತಾ ಐತೆ, ಈಯಮ್ಮಂಗೆ ಗಲಾಟೆ ಮಾಡಬಾರದಂತೆ. ಈ ಮನೇಲಿರೋ ಗಂಡಸರನ್ನೆಲ್ಲಾ ಕರ್ರಿ ಮತ್ತೆ. ನ್ಯಾಯ ಪಂಚಾಯ್ತಿ